ಅನುಬಂಧ – II

12-7-06 ರಂದು ವಿಧಾನಸಭೆಯಲ್ಲಿ ಮಂಡಿಸಲಾದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳು.

ದಿನಾಂಕ : **10-7-06**

11-7-06

ಪರಿಸರ ಮಾಲಿನ್ಯ ತಡೆಗಟ್ಟುವುದು

270 (1607) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಣಿಗಲ್ ಸಮೀಪ ಅಂಚೆ ಪಾಳ್ಯ ವ್ಯಾಪ್ತಿಯಲ್ಲಿರುವ ಕೈಗಾರಿಕೆಗಳಿಂದ ಹೊರಬಿಡುವ ಕೆಟ್ಟ ನೀರು ಮತ್ತು ಹೊಗೆಯಿಂದ ಕೆಟ್ಟ ವಾಸನೆ ಬರುತ್ತಿದ್ದು ಇದರಿಂದ ಪರಿಸರ ಮಾಲಿನ್ಯ ಉಂಟಾಗುವುದಲ್ಲದೇ ಅಕ್ಕಪಕ್ಕದ ಗ್ರಾಮಸ್ಥರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮಾಲಿನ್ಯ ತಡೆಗಟ್ಟಲು ಕ್ರಮ ಕೈಗೊಳ್ಳದಿರಲು ಕಾರಣವೇನು?

ಇ) ಗಮನಕ್ಕೆ ಬರದಿದ್ದಲ್ಲಿ ಇದರ ಬಗ್ಗೆ ಸೂಕ್ತ ಗಮನ ಹರಿಸಿ, ಪರಿಸರ ಮಾಲಿನ್ಯ ಉಂಟಾಗದಂತೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ;

ಈ) ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗಾಗಿ ಕೈಗೊಳ್ಳಲಾಗುವುದು.

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಹೌದು.

ಆ) ಕುಣಿಗಲ್ ಸಮೀಪ ಅಂಚೆ ಪಾಳ್ಯ ವ್ಯಾಪ್ತಿಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶವಿದ್ದು, ಇಲ್ಲಿ ಮುಖ್ಯವಾಗಿ 1) ಮೆ: ಹೆಚ್ ಅಂಡ್ ಆರ್ ಜಾನಸನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ 2) ಮೆ: ರಿಟ್ ಜೆಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, 3) ಮೆ: ಇಂಡೋಸ್ವ್ಯಾನಿಸ್ ಟೇಸ್ಟಿ ಫುಡ್ಸ್ ಪ್ರೈವೇಟ್ ಲಿಮಿಟೆಡ್ 4) ಮೆ: ಎಕೋವಿನಾಲ್ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ 5) ಮೆ: ಸೆಮಿಲ್ಯಾಬ್ಸ್ ಲಿಮಿಟೆಡ್ 6) ಮೆ: ಎಂ.ಎಸ್. ಕೋಕೋನಟ್ ಇಂಡಸ್ಟ್ರೀಸ್ ಎಂಬ ಘಟಕಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಘಟಕಗಳು ಸದರಿ ಘಟಕಗಳು ಜಲ (ಮಾಲಿನ್ಯ ನಿವಾರಣೆ ಮಾನ್ಯ ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರಕ್ಕೆ ಅರ್ಜಿ ಸಲ್ಲಿಸಿರುತ್ತದೆ. ಮೊದಲ 4 ಘಟಕಗಳು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು

ನಿಯಂತ್ರಣ) ಕಾಯ್ದೆ, 1981ರ ಅಡಿಯಲ್ಲಿ ಮಂಡಳಿಯು ಸಮ್ಮತಿಯನ್ನು ನೀಡಿರುತ್ತದೆ ಹಾಗೂ ಸದರಿ ಉದ್ದಿಮೆಗಳು ತ್ಯಾಜ್ಯ ನೀರು ಸಂಸ್ಕರಿಸಲು ತ್ಯಾಜ್ಯ ನೀರು ಸಂಸ್ಕರಣ ಘಟಕಗಳನ್ನು ಹೊಂದಿರುತ್ತವೆ. ಮೆ: ಸೆಮಿಲ್ಯಾಬ್ ಲಿಮಿಟೆಡ್ ಉದ್ದಿಮೆಯು 30.6.2006 ರವರೆಗೆ ಮಂಡಳಿಯು ಸಮ್ಮತಿಯನ್ನು ಹೊಂದಿದ್ದು, 2006-07ರ ಸಾಲಿಗೆ ಜಲ ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳು ಮಂಡಳಿಯ ಪರಿಶೀಲನೆಯಲ್ಲಿವೆ.

ಆದಾಗ್ಯೂ 1) ಮೆ: ಸೆಮಿಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ 2) ಮೆ: ಎಕೋವಿನಾಲ್ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್ 3) ಎಂ.ಎನ್. ಕೋಕೋನೆಟ್ ಇಂಡಸ್ಟ್ರೀಸ್ ಘಟಕಗಳ ಕಲುಷಿತ ನೀರಿನ ಶುದ್ಧೀಕರಣ ಸಂಸ್ಕರಣ ಘಟಕದ ಕಾರ್ಯಾಚರಣೆಯಲ್ಲಿ ಏರುಪೇರಾಗಿ, ಕಲುಷಿತ ನೀರನ್ನು ಕರ್ನಾಟಕ ಕೈಗಾರಿಕಾ, ಪ್ರದೇಶಾಭಿವೃದ್ಧಿ ಮಂಡಳಿಯ ಚರಂಡಿಗೆ ಬಿಟ್ಟಿರುವುದನ್ನು ಗಮನಿಸಲಾಗಿರುತ್ತದೆ. ಈ ಬಗ್ಗೆ ಸದರಿ ಉದ್ದಿಮೆಗಳಿಗೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ, 1974 ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ, ಉದ್ದಿಮೆಯವರನ್ನು ಮೌಖಿಕ ವಿಚಾರಣೆಗೆ ಕರೆಯಲಾಗಿರುತ್ತದೆ. ಮೌಖಿಕ ವಿಚಾರಣೆಯಲ್ಲಿ ಮಂಡಳಿಯಿಂದ ಸದರಿ ಕೈಗಾರಿಕೆಗಳಿಗೆ ಮಾಲಿನ್ಯ ನಿಯಂತ್ರಣದ ಕ್ರಮಗಳನ್ನು ಸಂಪೂರ್ಣವಾಗಿ ಅಳವಡಿಸಿ ಯಾವುದೇ ರೀತಿಯ ತ್ಯಾಜ್ಯ ನೀರನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಚರಂಡಿಗೆ ಅಥವಾ ಕೈಗಾರಿಕೆಯಿಂದ ಹೊರಗಡೆ ವಿಸರ್ಜಿಸದಂತೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿರುತ್ತದೆ. ಇದಕ್ಕೆ ಉದ್ದಿಮೆಯವರು ಸಹ ಕ್ರಮವನ್ನು ತೆಗೆದುಕೊಳ್ಳಲು ಒಪ್ಪಿರುತ್ತಾರೆ.

ಆದಾಗ್ಯೂ ಮೆ: ಎಂ.ಎಸ್. ಕೋಕೊನೆಟ್ ಇಂಡಸ್ಟ್ರೀಸ್ ಘಟಕ ಮಂಡಳಿಯ ನಿರ್ದೇಶನದಂತೆ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ಸಂಪೂರ್ಣವಾಗಿ ಅಳವಡಿಸದೆ ಇರುವುದರಿಂದ ಉದ್ದಿಮೆಯ ಸಮ್ಮತಿ ಪತ್ರವನ್ನು ತಿರಸ್ಕರಿಸಲಾಗಿದೆ. ತಿರಸ್ಕರಿಸಿದ ನಂತರ ಉದ್ದಿಮೆಯವರು ಮಲಿನ ನೀರನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಚರಂಡಿಗೆ ಬಿಡುವುದನ್ನು ನಿಲ್ಲಿಸಿರುತ್ತಾರೆ. ಇದನ್ನು ಮಂಡಳಿಯ ಪ್ರಾದೇಶಿಕ ಅಧಿಕಾರಿಗಳು ಉದ್ದಿಮೆಯ ಪರಿವೀಕ್ಷಣೆ ಸಮಯದಲ್ಲಿ ಗಮನಿಸಿರುತ್ತಾರೆ.

ಗಿಡಮೂಲಿಕ ತಯಾರಿಕಾ ಘಟಕವಾಗಿರುವ ಮೆ: ಸೆಮಿಲ್ಯಾಬ್ಸ್ ಲಿಮಿಟೆಡ್‌ನಿಂದ ವಾಸನೆ ಸಮಸ್ಯೆ ಉಂಟಾಗುತ್ತಿರುವುದನ್ನು ಮಂಡಳಿ ಗಮನಿಸಿರುತ್ತದೆ. ಈ ಬಗ್ಗೆ ಮಂಡಳಿಯಿಂದ ಸದರಿ ಕೈಗಾರಿಕೆಗೆ ವಾಸನೆ ತಡೆಗಟ್ಟಲು ಸೂಕ್ತ ಕ್ರಮವನ್ನು ಅಳವಡಿಸಲು ದಿನಾಂಕ: 03-05-06 ರಂದು ನಿರ್ದೇಶಿಸಲಾಗಿರುತ್ತದೆ. ಈ ನಿರ್ದೇಶನದಂತೆ ಕೈಗಾರಿಕೆಯು ವಾಸನೆಯನ್ನು ತಡೆಯಲು ಕ್ರಮವನ್ನು ಕೈಗೊಂಡಿರುತ್ತದೆ.

ನಿಯಮಿತವಾಗಿ ಮಂಡಳಿಯು ಸದರಿ ಕೈಗಾರಿಕಾ ಪ್ರದೇಶದಲ್ಲಿ ನಿಯಮಿತವಾಗಿ ಪರಿವೀಕ್ಷಣೆಯನ್ನು ನಡೆಸುತ್ತಿರುತ್ತದೆ. ಉಲ್ಲಂಘನೆ ಕಂಡುಬಂದಲ್ಲಿ ಕೈಗಾರಿಕೆಗಳ ವಿರುದ್ಧ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) 1981ರ ಅಡಿಯಲ್ಲಿ ಸೂಕ್ತ ಕ್ರಮವನ್ನು ಜರುಗಿಸಲಾಗುವುದು.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಜಲಸಂವರ್ಧನೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್‌ನಿಂದ ಬಂದ ಹಣ

271 (1499) ಶ್ರೀ ಶ್ರೀನಿವಾಸಗೌಡ ಕೆ. (ಕೋಲಾರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಜಲ ಸಂವರ್ಧನೆ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್‌ನಿಂದ ಬಂದಿರುವ ಹಣ ಎಷ್ಟು;

ಆ) ಇದುವರೆವಿಗೂ ಈ ಯೋಜನೆಯಿಂದ ತೆಗೆದುಕೊಂಡ ಕೆರೆಗಳು ಎಷ್ಟು;

ಇ) ಈವರೆವಿಗೂ ಎಷ್ಟು ಕೆರೆಗಳು ಪೂರ್ತಿ ಅಭಿವೃದ್ಧಿ ಹೊಂದಿವೆ;

ಈ) ಸರ್ಕಾರ ಈ ಯೋಜನೆಗಾಗಿ ವಿಶ್ವಬ್ಯಾಂಕಿನಿಂದ ಮತ್ತೆ ಹಣವನ್ನು ಕೇಳಿದೆಯೇ;

ಉ) ಕೇಳಿದ್ದಲ್ಲಿ ಎಷ್ಟು ಹಣವನ್ನು ಕೇಳಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) ವಿಶ್ವಬ್ಯಾಂಕ್‌ನಿಂದ ಮಂಜೂರಾದ ಮೂಲ ಯೋಜನಾ ಮೊತ್ತ ರೂ. 670.59 ಕೋಟಿಗಳು. ಪರಿಷ್ಕೃತ ಯೋಜನಾ ಮೊತ್ತ ರೂ.508.63 ಕೋಟಿಗಳು.

ಆ) ಇದುವರೆಗೆ 1290 ಕೆರೆಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಇ) 530 ಕೆರೆಗಳನ್ನು ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ.

ಈ) ವಿಶ್ವಬ್ಯಾಂಕ್‌ನೊಂದಿಗೆ ಈ ಬಗ್ಗೆ ಚರ್ಚಿಸಲಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಉ) ಅಂದಾಜು ಮೊತ್ತ 495.40 ಕೋಟಿ ರೂ.ಗಳು.

ಸಾರಾಯಿ ಮಾರಾಟದಿಂದ ಬಂದ ಆದಾಯ

272 (575) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು; (ವರ್ಷಾವಾರು, ತಾಲ್ಲೂಕುವಾರು ವಿವರ ನೀಡುವುದು) ;

ಆ) ಗ್ರಾಮೀಣ ಭಾಗದಲ್ಲಿ ಬಹಳಷ್ಟು ಕುಟುಂಬಗಳು ಸಾರಾಯಿ ಸೇವನೆಯಿಂದ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಸಾರಾಯಿ ಕುಡಿತದಿಂದಾಗಿ ಹಲವಾರು ಕುಟುಂಬಗಳು ಆರ್ಥಿಕವಾಗಿ ಮಾನಸಿಕವಾಗಿ ತೊಂದರೆಗೀಡಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕುಡಿತ ತಡೆಗಟ್ಟಲು ಗ್ರಾಮಸ್ಥರೇನಾದರೂ ಗ್ರಾಮ ಸಭೆಗಳಲ್ಲಿ ನಿರ್ಣಯಿಸಿದಲ್ಲಿ ಅಲ್ಲಿ ಸಾರಾಯಿ ಮಾರಾಟ ಮಾಡುವುದನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?